# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 981

ಸದಸ್ಯರ ಹೆಸರು : ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 24-02-2023

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸೇರಿದ ಕೃಷಿ ಭೂಮಿಯಲ್ಲಿ ಕೃಷಿ ಹೊಂಡ ಯೋಜನೆಗೆ ಸಲ್ಲಿಕೆಯಾದ ಅರ್ಜಿಗಳು ಎಷ್ಟು; | ಕೃಷಿ ಇಲಾಖೆಯಲ್ಲಿ ಪ್ರಸ್ತುತ ಯಾವುದೇ ಕೃಷಿ ಹೊಂಡ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿಲ್ಲ.<br><br>ಕೃಷಿ ಇಲಾಖೆಯ ಕೃಷಿ ಭಾಗ್ಯ ಯೋಜನೆಯಡಿ ಅರ್ಜಿಗಳನ್ನು ಸಾಮಾನ್ಯ/ಪ.ಜಾ./ಪ.ಪಂ ವರ್ಗವಾರು ಸ್ವೀಕರಿಸಲಾಗಿರುತ್ತದೆ. ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೃಷಿ ಭಾಗ್ಯ ಯೋಜನೆಯಡಿ 2014-15ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಕೃಷಿ ಹೊಂಡಕ್ಕಾಗಿ ಎಲ್ಲಾ ವರ್ಗದ ರೈತರಿಂದ ಸಲ್ಲಿಕೆಯಾದ ಒಟ್ಟು ಅರ್ಜಿಗಳ ವಿವರ ಈ ಕೆಳಕಂಡಂತಿವೆ;<br><br><table><tr><th>ಕ್ರ. ಸಂ</th><th>ಜಿಲ್ಲೆ</th><th>ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ</th></tr><tr><td>1</td><td>ಕಲಬುರ್ಗಿ</td><td>26500</td></tr><tr><td>2</td><td>ಯಾದಗಿರಿ</td><td>8717</td></tr><tr><td colspan="2">ಒಟ್ಟು</td><td>**35217**</td></tr></table><br>ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಪ್ರಸ್ತುತ ಪ್ರತ್ಯೇಕವಾಗಿ ಯಾವುದೇ ಕೃಷಿ ಹೊಂಡ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿಲ್ಲ. ಆದರೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಇತರೆ ಕಾಮಗಾರಿಗಳ ಜೊತೆಗೆ ಕೃಷಿ ಹೊಂಡಗಳನ್ನು ನಿರ್ಮಿಸಲಾಗುತ್ತಿದೆ.<br><br>ಪ್ರಸ್ತುತ ವರ್ಷ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸೇರಿದ ಕೃಷಿ ಭೂಮಿಯಲ್ಲಿ ಕೃಷಿ ಹೊಂಡ ನಿರ್ಮಿಸಲು ಕಲಬುರಗಿ ಜಿಲ್ಲೆಯಲ್ಲಿ 272 ಅರ್ಜಿಗಳು ಹಾಗೂ ಯಾದಗಿರಿ ಜಿಲ್ಲೆಯಲ್ಲಿ 543 ಅರ್ಜಿಗಳು ಸಲ್ಲಿಕೆಯಾಗಿರುತ್ತವೆ. |

**ಆ)** ಸಲ್ಲಿಕೆಯಾದ ಅರ್ಜಿಗಳಲ್ಲಿ ಎಷ್ಟು ರೈತರ ಅರ್ಜಿಗಳು ಕೃಷಿ ಹೊಂಡ ಯೋಜನೆಗೆ ಪುರಸ್ಕೃತಗೊಂಡಿವೆ; ಇನ್ನು ಬಾಕಿ ಇರುವ ಅರ್ಜಿಗಳು ಎಷ್ಟು; ಕೃಷಿ ಹೊಂಡಕ್ಕೆ ಸರ್ಕಾರ ನೀಡುವ ಅನುದಾನ ಎಷ್ಟು; (ವಿವರ ನೀಡುವುದು)

ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೃಷಿ ಭಾಗ್ಯ ಯೋಜನೆಯಡಿ 2014-15ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಕೃಷಿ ಹೊಂಡಕ್ಕಾಗಿ ಒಟ್ಟು ರೈತರಿಂದ ಸಲ್ಲಿಕೆಯಾದ ಅರ್ಜಿಗಳಲ್ಲಿ ಕೃಷಿ ಹೊಂಡ ನಿರ್ಮಿಸಿಕೊಂಡ ಮತ್ತು ಬಾಕಿ ಇರುವ ಅರ್ಜಿಗಳ ವಿವರ ಈ ಕೆಳಕಂಡಂತಿವೆ;

| ಕ್ರ. ಸಂ | ಜಿಲ್ಲೆ | ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ | ಕೃಷಿ ಹೊಂಡ ಫಲಾನುಭವಿಗಳ ಸಂ. | ಬಾಕಿ ಅರ್ಜಿಗಳ ಸಂಖ್ಯೆ |
|---|---|---|---|---|
| 1 | ಕಲಬುರ್ಗಿ | 26500 | 15994 | 10506 |
| 2 | ಯಾದಗಿರಿ | 8717 | 8603 | 114 |
| **ಒಟ್ಟು** | | **35217** | **24597** | **10620** |

ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡಕ್ಕೆ ನೀಡಲಾದ ಸಹಾಯಧನವನ್ನು ಮಣ್ಣಿನ ವಿಧ ಹಾಗೂ ಕೃಷಿ ಹೊಂಡದ ಅಳತೆಯ ಆಧಾರದ ಮೇಲೆ ಸಾಮಾನ್ಯ ರೈತರಿಗೆ ಶೇ.80 ಹಾಗೂ ಪ.ಜಾ ಮತ್ತು ಪ.ಪಂ ರೈತರಿಗೆ ಶೇ. 90 ರಂತೆ ಪ್ರತ್ಯೇಕವಾದ ಸಹಾಯಧನವನ್ನು ನೀಡಲಾಗಿರುತ್ತದೆ. ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.

ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಸ್ವೀಕೃತಿಯಾದ 272 ಅರ್ಜಿಗಳು ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಸ್ವೀಕೃತಿಯಾದ 543 ಅರ್ಜಿಗಳು ಪುರಸ್ಕೃತಗೊಂಡಿವೆ, ಹಾಗೂ ಯಾವುದೇ ಅರ್ಜಿಯು ಬಾಕಿ ಉಳಿದಿರುವುದಿಲ್ಲ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೃಷಿ ಹೊಂಡ ನಿರ್ಮಾಣಕ್ಕಾಗಿ ಕಲಬುರಗಿ ಜಿಲ್ಲೆಗೆ ರೂ.92.952 ಲಕ್ಷಗಳನ್ನು ಹಾಗೂ ಯಾದಗಿರಿ ಜಿಲ್ಲೆಗೆ ರೂ.340.59 ಲಕ್ಷಗಳ ಅನುದಾನ ಒದಗಿಸಲಾಗಿದೆ.

**ಇ)** ಸದರಿ ಯೋಜನೆಯಲ್ಲಿ ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು? (ವಿವರ ನೀಡುವುದು)

ಕೃಷಿ ಇಲಾಖೆಯ ಕೃಷಿ ಭಾಗ್ಯ ಯೋಜನೆಯಡಿ ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ 2014-15ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿವೆ;

| ವರ್ಷ | ಕೃಷಿ ಭಾಗ್ಯ ಯೋಜನೆಯಡಿ ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) | |
|---|---|---|
| | ಕಲಬುರ್ಗಿ | ಯಾದಗಿರಿ |
| 2014-15 | 2532.43 | 1324.85 |
| 2015-16 | 2169.90 | 681.50 |
| 2016-17 | 1927.20 | 1175.65 |

| | | |
|---|---|---|
| 2017-18 | 2892.67 | 1659.81 |
| 2018-19 | 3455.78 | 679.25 |
| 2019-20 | 1558.58 | 203.25 |
| 2020-21 | 0 | 92.32 |
| **ಒಟ್ಟು** | **14536.56** | **5816.63** |

ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೃಷಿ ಹೊಂಡ ನಿರ್ಮಾಣಕ್ಕಾಗಿ ಕಲಬುರಗಿ ಜಿಲ್ಲೆಗೆ ಒಟ್ಟು ರೂ.92.952 ಲಕ್ಷಗಳು ಹಾಗೂ ಯಾದಗಿರಿ ಜಿಲ್ಲೆಗೆ ಒಟ್ಟು ರೂ.340.59 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.

ಸಂಖ್ಯೆ: AGRI-AML/53/2023

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ -1

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: LCQ-981

<u>ಅನುಬಂಧ</u>: ಕೃಷಿ ಭಾಗ್ಯ ಯೋಜನೆಯಡಿ ಮಣ್ಣಿನ ವಿಧ ಹಾಗೂ ಕೃಷಿ ಹೊಂಡದ ಅಳತೆಯ ಆಧಾರದ ಮೇಲೆ ವರ್ಗವಾರು ರೈತರಿಗೆ ಸರ್ಕಾರದಿಂದ ನಿಗಧಿಪಡಿಸಿದ ಸಹಾಯಧನದ ವಿವರ (2018-19 DSR ನಂತ್ರೆ)

| ಕ್ರ ಸಂ | ಕೃಷಿ ಹೊಂಡ (ಕೆಂಪು ಮಣ್ಣು 1:1 ಇಳಿಜಾರು) | | | | | | ಕೃಷಿ ಹೊಂಡ (ಕಪ್ಪು ಮಣ್ಣು 1.5:1 ಇಳಿಜಾರು) | | | | |
|---|---|---|---|---|---|---|---|---|---|---|---|
| | ಕೃಷಿ ಹೊಂಡದ ಅಳತೆ (ಮಿ.) | ಕೃಷಿ ಹೊಂಡದ ಒಟ್ಟು ದರ (ರೂ:ಗಳಲ್ಲಿ) | ಕೃಷಿ ಹೊಂಡ | | | | ಕೃಷಿ ಹೊಂಡದ ಒಟ್ಟು ದರ (ರೂ.ಗಳಲ್ಲಿ) | ಕೃಷಿ ಹೊಂಡ | | | |
| | | | ಸಾಮಾನ್ಯ | | ಪ.ಜಾ./ಪ.ಪಂ | | | ಸಾಮಾನ್ಯ | | ಪ.ಜಾ./ಪ.ಪಂ | |
| | | | ಸರ್ಕಾರಿ ಸಹಾಯಧನ (80%) | ರೈತರ ವಂತಿಕೆ (20%) | ಸರ್ಕಾರಿ ಸಹಾಯಧನ (90%) | ರೈತರ ವಂತಿಕೆ (10%) | | ಸರ್ಕಾರಿ ಸಹಾಯಧನ (80%) | ರೈತರ ವಂತಿಕೆ (20%) | ಸರ್ಕಾರಿ ಸಹಾಯಧನ (90%) | ರೈತರ ವಂತಿಕೆ (10%) |
| 1 | **21*21*3** | 78734.7 | 62987.752 | 15746.938 | 70861.221 | 7873.469 | 70650.77 | 56520.616 | 14130.154 | 63585.693 | 7065.077 |
| 2 | **18*18*3** | 56703.2 | 45362.52 | 11340.63 | 51032.835 | 5670.315 | 56017.67 | 44814.136 | 11203.534 | 50415.903 | 5601.767 |
| 3 | **15*15*3** | 43036.1 | 34428.888 | 8607.222 | 38732.499 | 4303.611 | 38449.77 | 30759.816 | 7689.954 | 34604.793 | 3844.977 |
| 4 | **12*12*3** | 29546.9 | 23637.48 | 5909.37 | 26592.165 | 2954.685 | 29246.37 | 23397.096 | 5849.274 | 26321.733 | 2924.637 |
| 5 | **10*10*3** | 24091.9 | 19273.512 | 4818.378 | 21682.701 | 2409.189 | ... | ... | ... | ... | ... |